# GOVERNMENT OF KARNATAKA
## (FOOD SAFETY & DRUG ADMINISTRATION)
## BOARD OF EXAMINING AUTHORITY (D.PHARMCY)
## ಪರೀಕ್ಷಾ ಪ್ರಾಧಿಕಾರ ಮಂಡಳಿ (ಡಿ.ಫಾರ್ಮಸಿ), ಬೆಂಗಳೂರು

**C/o Government College of Pharmacy, No. 2, 3rd Floor, P Kalingarao Road, Subbaiah Circle, Bangalore-27**

Email: bea.dcd-ka@nic.in, beadpharmacy@yahoo.com Phone: 080- 22483465, 080- 22223466

Website: www.beadpharmacy.org


ಸಂಖ್ಯೆ: ಆಔಆ/ಪಪ್ರಾಮಂ/ಪ್ರವೇಶ–ಅನುಮೋದನೆ/2024–25 ದಿನಾಂಕ: 29.08.2025

**ಪರಿಷ್ಕೃತ ಕಛೇರಿ ಆದೇಶ**

**ವಿಷಯ: 2024–25 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಪ್ರಥಮ ಡಿ.ಫಾರ್ಮ ವಿದ್ಯಾರ್ಥಿಗಳ ಪ್ರವೇಶ ಅರ್ಜಿಗಳ ಪರಿಶೀಲನೆ ಹಾಗೂ ತಾತ್ಕಾಲಿಕ ಪ್ರವೇಶ ಅನುಮೋದನಾ ಪ್ರಕ್ರಿಯೆಯ ಕುರಿತು.**

* * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024–25 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಡಿ.ಫಾರ್ಮ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶ ಅರ್ಜಿ, ದಾಖಲಾತಿಗಳ ಪರಿಶೀಲನೆ ಹಾಗೂ ತಾತ್ಕಾಲಿಕ ಪ್ರವೇಶ ಅನುಮೋದನಾ ಪ್ರಕ್ರಿಯೆಗಾಗಿ ರಾಜ್ಯಾದ್ಯಾಂತದ ಡಿ.ಫಾರ್ಮ ಶಿಕ್ಷಣದ ವಿದ್ಯಾ ಸಂಸ್ಥೆಗಳಿಗೆ ಈ ಕೆಳಕಂಡಂತೆ ಪರೀಕ್ಷಾ ಪ್ರಾಧಿಕಾರ ಮಂಡಳಿಯ ಕಛೇರಿಗೆ ಹಾಜರಾಗಲು ದಿನಾಂಕವನ್ನು ಗೊತ್ತುಪಡಿಸಲಾಗಿದೆ. ನಿಗದಿತ ದಿನಾಂಕಗಳಂದು ಗೊತ್ತುಪಡಿಸಲಾದ ಎಲ್ಲಾ ವಿದ್ಯಾಸಂಸ್ಥೆಯವರು ತಪ್ಪದೇ ಬೆಳಿಗ್ಗೆ 10:30 ಘಂಟೆಗೆ ಹಾಜರಾಗುವುದು.

| ಕ್ರಮ ಸಂಖ್ಯೆ | ಪ್ರವೇಶ ಅನುಮೋದನಾ ಪ್ರಕ್ರಿಯೆಯು ನಡೆಯುವ ದಿನಾಂಕ ಮತ್ತು ಸಮಯ | | ಕಾಲೇಜ್ ಕೋಡ್‌ಗಳು |
|---|---|---|---|
| 1. | 08.09.2025 | ಬೆಳಿಗ್ಗೆ 10.30 ರಿಂದ | 701 ರಿಂದ 735 |
| 2. | 09.09.2025 | ಬೆಳಿಗ್ಗೆ 10.30 ರಿಂದ | 736 ರಿಂದ 770 |
| 3. | 10.09.2025 | ಬೆಳಿಗ್ಗೆ 10.30 ರಿಂದ | 801 ರಿಂದ 825 |
| 4. | 11.09.2025 | ಬೆಳಿಗ್ಗೆ 10.30 ರಿಂದ | 826 ರಿಂದ 850 |
| 5. | 12.09.2025 | ಬೆಳಿಗ್ಗೆ 10.30 ರಿಂದ | 851 ರಿಂದ 875 |
| 6. | 15.09.2025 | ಬೆಳಿಗ್ಗೆ 10.30 ರಿಂದ | 876 ರಿಂದ 899 |
| 7. | 16.09.2025 | ಬೆಳಿಗ್ಗೆ 10.30 ರಿಂದ | 901 ರಿಂದ 923 |
| 8. | 17.09.2025 | ಬೆಳಿಗ್ಗೆ 10.30 ರಿಂದ | 601 ರಿಂದ 625 |
| 9 | 18.09.2025 | ಬೆಳಿಗ್ಗೆ 10.30 ರಿಂದ | 626 ರಿಂದ 650 |
| 10 | 19.09.2025 | ಬೆಳಿಗ್ಗೆ 10.30 ರಿಂದ | 650 ರಿಂದ 675 |
| 11 | 20.09.2025 | ಬೆಳಿಗ್ಗೆ 10.30 ರಿಂದ | 676 ರಿಂದ 699 |
| 12 | 22.09.2025 | ಬೆಳಿಗ್ಗೆ 10.30 ರಿಂದ | 501 ರಿಂದ 525 |
| 13 | 23.09.2025 | ಬೆಳಿಗ್ಗೆ 10.30 ರಿಂದ | 526 ರಿಂದ 550 |
| 14 | 24.09.2025 | ಬೆಳಿಗ್ಗೆ 10.30 ರಿಂದ | 551 ರಿಂದ 575 |
| 15 | 25.09.2025 | ಬೆಳಿಗ್ಗೆ 10.30 ರಿಂದ | 576 ರಿಂದ 599 ಹಾಗೂ 951 ರಿಂದ 963 |

2024–25ನೇ ಶೈಕ್ಷಣಿಕ ಸಾಲಿನ Calendar of Events ನಲ್ಲಿ ತಾತ್ಕಾಲಿಕ ಪ್ರವೇಶ ಅನುಮೋದನೆಗೆ ಸಲ್ಲಿಸಬೇಕಾದ ಮಾಹಿತಿಗಳ ಬಗ್ಗೆ ವಿವರವಾಗಿ ತಿಳಿಸಲಾಗಿದ್ದು, ಮೇಲೆ ತಿಳಿಸಿದ ದಿನಾಂಕಗಳಂದು ಸಂಬಂಧಿಸಿದ

. . . . . . 2

ವಿದ್ಯಾಸಂಸ್ಥೆಯವರು ಮಂಡಳಿಗೆ ಈಗಾಗಲೇ ಸಲ್ಲಿಸಿರುವ ದಾಖಲೆಗಳ ಪರಿಶೀಲನೆ ನಡೆಸಲಾಗುವುದು. ಪ್ರವೇಶ ಅರ್ಜಿಗಳ ಪರಿಶೀಲನೆ ಹಾಗೂ ಪ್ರವೇಶ ಅನುಮೋದನಾ ಪ್ರಕ್ರಿಯೆಯನ್ನು ವಿದ್ಯಾ ಸಂಸ್ಥೆಗಳ ಸಮ್ಮುಖದಲ್ಲಿಯೇ ನಡೆಸಲಿರುವುದರಿಂದ ನಿಗದಿಪಡಿಸಿದ ದಿನಾಂಕದಂದು ಮೇಲೆ ತಿಳಿಸಿರುವ ವಿದ್ಯಾಸಂಸ್ಥೆಯವರು ಪರೀಕ್ಷಾ ಪ್ರಾಧಿಕಾರ ಮಂಡಳಿಯಲ್ಲಿ ತಪ್ಪದೇ ಹಾಜರಿದ್ದು, ಪರಿಶೀಲನಾ ಸಮಿತಿಯ ಮುಂದೆ ಎಲ್ಲಾ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ಈ ಮೂಲಕ ಸೂಚಿಸಲಾಗಿದೆ.

ಅಲ್ಲದೇ, ಸದರಿ ದಿನದಂದು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸಲಾಗಿದೆ.

1) ಪ್ರವೇಶ ಶುಲ್ಕ ಪಾವತಿಸಿದ ಚಲನ್‌ನ ಪ್ರತಿಯೊಂದಿಗೆ ಶುಲ್ಕ ಪಾವತಿಯ ವಿವರಗಳು.
2) 2024-25 ನೇ ಶೈಕ್ಷಣಿಕ ಸಾಲಿಗೆ ಭಾರತೀಯ ಫಾರ್ಮಸಿ ಪರಿಷತ್ತು, ನವದೆಹಲಿ (ಪಿ.ಸಿ.ಐ) ನೀಡಿದ ಅನುಮೋದನಾ ಪತ್ರದ ಪ್ರತಿ
3) ಸರ್ಕಾರದಿಂದ ಪಡೆದ ಅನುಮೋದನೆ ಪತ್ರ (GOK).
4) ***ಪ್ರವೇಶ ಅನುಮೋದನೆ ಪ್ರಕ್ರಿಯಗೆ ಕಡ್ಡಾಯವಾಗಿ ವಿದ್ಯಾಸಂಸ್ಥೆಯ ಪ್ರಾಂಶುಪಾಲರು/ಆಡಳಿತಾಧಿಕಾರಿಯವರು (ADMINISTRATIVE HEAD) ಅಧಿಕೃತ ಗುರುತಿನ ಚೀಟಿಯೊಂದಿಗೆ ಹಾಜರಾಗಲು ಸೂಚಿಸಿದೆ.***
5) ***2024-25 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ / ಪೋಷಕರ ಹೆಸರು ತಿದ್ದುಪಡಿ ಅಗತ್ಯವಿದ್ದಲ್ಲಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಪ್ರಾಂಶುಪಾಲರ ದೃಢೀಕರಣ ಹಾಗೂ ಪೂರಕ ದಾಖಲೆಗಳನ್ನು ಸಲ್ಲಿಸಲು ಸೂಚಿಸಿದೆ. ತದನಂತರ ಸಲ್ಲಿಸುವ ಯಾವುದೇ ಹೆಸರು ತಿದ್ದುಪಡಿ ಮನವಿಗಳನ್ನು ಪರಿಗಣಿಸುವುದಿಲ್ಲ ಎಂದು ಕಟ್ಟುನಿಟ್ಟಾಗಿ ಸೂಚಿಸಿದೆ.***

***ಸೂಚನೆ: ನಿಗದಿ ಪಡಿಸಿದ ದಿನಾಂಕದಂದು ಮಂಡಳಿಗೆ ಹಾಜರಾಗದ ಹಾಗೂ ಹಾಜರಾಗಿ ಪ್ರವೇಶ ಅನುಮೋದನೆಗಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸದ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳ ಪ್ರವೇಶದ ಅನುಮೋದನೆಯನ್ನು ಮಾಡಲು ಅವಕಾಶವಿರುವುದಿಲ್ಲ ಹಾಗೂ ಅಂತಹ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗುವುದಿಲ್ಲ.***

(ಡಾ. ಭಾಸ್ಕರನ್. ಜೆ)
ಉಪ ಔಷಧ ನಿಯಂತ್ರಕರು
ಹಾಗೂ ಸದಸ್ಯ ಕಾರ್ಯದರ್ಶಿ (ಪ್ರ),
ಪರೀಕ್ಷಾ ಪ್ರಾಧಿಕಾರ ಮಂಡಳಿ,
ಔಷಧ ನಿಯಂತ್ರಣ ಇಲಾಖೆ,
ಬೆಂಗಳೂರು.

ಇವರಿಗೆ,
ಸಮಿತಿಯ ಎಲ್ಲಾ ಸದಸ್ಯರುಗಳಿಗೆ.

ಪ್ರತಿಯನ್ನು:-

1) ಮಾನ್ಯ ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಬೆಂಗಳೂರು – ಮಾನ್ಯರ ಅವಗಾಹನೆಗೆ ಸಲ್ಲಿಸಲಾಗಿದೆ.
2) ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.